ಬಲವಾದ ಸಂಕಲ್ಪ ಅವನದ್ದು. ಫೈಲನ್ನು ಮುಚ್ಚಿ ಪಿಸಿಯ ಕೈಯಲ್ಲಿಟ್ಟ.

'ಇದನ್ನು ಭದ್ರವಾಗಿ ಕಪಾಟಿನಲ್ಲಿಟ್ಟು ಬಿಡು'

ಇನ್ಸ್‌ಪೆಕ್ಟರ್ ರಾಜಧಾನಿ ಒಂದು ಬಿಳಿಯ ಹಾಳೆಯಲ್ಲಿ ಸಾಧ್ಯತೆಗಳನ್ನೆಲ್ಲಾ ಬರೆದು ಆಲೋಚನೆಗೊಳಗಾದ. ಮಹತ್ತರದ ಸುಳಿವೊಂದು ಅವನನ್ನು ಕಾಡಿತು. ಅವನು ಮತ್ತೆ 'ಮೇನಕಾ'ದತ್ತ ಹೋಗಬೇಕೆಂದು ನಿರ್ಧರಿಸಿದ.

ಇನ್ಸ್‌ಪೆಕ್ಟರ್ ರಾಜಧಾನಿ ಒಬ್ಬನೆ ಜೀಪನ್ನೇರಿ 'ಮೇನಕಾ'ದತ್ತ ಓಡಿಸಿದ. `ಮೇನಕಾ'ದ ರಸ್ತೆಗಿಳಿದಾಗ ಅವನಿಗೆ ನೆನಪಾದದ್ದು ಯಾವಾಗಲೂ ಆಳೆತ್ತರದ ಕಪ್ಪಗಿನ ಗೇಟು ಮುಚ್ಚಿರುತಿತ್ತು. ಆದರೆ ಈಗ ಯಾವಾಗಲೂ ತೆರೆದುಕೊಂಡೇ ಇರುತ್ತದೆ. ಇದು ಭುಜಂಗೇಶರಾಯರು ಇಲ್ಲದ ಸಮಯದಲ್ಲಿ ಮಾತ್ರ! ಭುಜಂಗೇಶರಾಯರು ಹೈದರಾಬಾದ್‌ನಿಂದ ಮರಳಿದ್ದಾರೆ. ಹಾಗಾದರೆ ಇವತ್ತು ಗೇಟು ಮುಚ್ಚಿರುತ್ತದೆ.

ಜೀಪು ಮಣ್ಣಿನ ರಸ್ತೆಯನ್ನು ಸವೆಸಿ ಬಹಳ ದೂರ ಬರುತ್ತಲೇ 'ಮೇನಕಾ'ದ ಗೇಟು ಹಾಗೆ ತೆರೆದುಕೊಂಡಿರುವುದು ಗಮನಕ್ಕೆ ಬಂತು. ಅಂದರೆ ಭುಜಂಗೇಶರಾಯರು ಮನೆಯಲ್ಲಿಲ್ಲ! ಸಂದೇಹ ಮೂಡಿತು.

ಅಧಿಕಾರಿ ಜೀಪನ್ನು ಗೇಟಿನ ಹೊರಗೆ ನಿಲ್ಲಿಸಿ ವೆರಾಂಡ ದಾಟಿ ಮುಖ್ಯ ದ್ವಾರದತ್ತ ನಡೆದ. ಆಳುಗಳು ಯಾರೂ ಮನೆಯಲ್ಲಿಲ್ಲದಂತೆ ಕಂಡಿತು. ಕರೆಗಂಟೆಯನ್ನೊತ್ತಿದ. ಒಳಗಿನಿಂದ ಕಾಶಮ್ಮನ ಸಹಾಯಕಿ ನಳಿನಿ ಬಾಗಿಲು ತೆರೆದು ನಿಂತಳು. ಪೊಲೀಸ್ ಅಧಿಕಾರಿಯನ್ನು ನೋಡಿ ಬೆದರಿದವಳೇ ಸರಿದು ನಿಂತು ಆತ ಒಳಗೆ ಬರಲು ಸಹಾಯ ಮಾಡಿದಳು.

'ಮನೇಲಿ ಯಾರೂ ಇಲ್ವೆ?' ಅಧಿಕಾರಿಯ ತನಿಖಾ ನೋಟ ಮನೆಯ ಹಜಾರವನ್ನು ದಾಟಿ ಮೆಟ್ಟಿಲುಗಳತ್ತ ಸಾಗಿತು.

'ಇಲ್ಲ ಸಾಹೇಬ್ರೆ' ಚುಟುಕಾಗಿ ಉತ್ತರಿಸುವಾಗ ಅವಳ ದನಿ ನಡುಗಿತು. ಇನ್ಸ್‌ಪೆಕ್ಟರ್‌ಗೆ ತಾನು ಬಂದ ಕೆಲಸ ಆಗಲಾರದೆಂದು ತಿಳಿಯಿತು. ಆದರೂ ಸೋಫಾದಲ್ಲಿ ಕುಳಿತು ತನ್ನ ಅಧಿಕಾರಯುತ ದರ್ಪದ ಮಾತುಗಳಲ್ಲಿ ಕೇಳಿದ.

'ಭುಜಂಗೇಶರಾಯರು ಹೈದರಾಬಾದ್‌ನಿಂದ ಹಿಂತಿರುಗಿಲ್ಲವೆ?'

ನಳಿನಿಗೆ ಅವರು ಎಲ್ಲಿಂದ ಹಿಂತಿರುಗಿರುವರೆಂದು ತಿಳಿಯಲಿಲ್ಲ. ಇನ್ಸ್‌ಪೆಕ್ಟರ್‌ನ ಮಾತಿಗೆ ಅಳುಕುತ್ತಲೇ ಉತ್ತರಿಸಿದಳು.

'ಬುದ್ಧಿ, ಬಂದಿದ್ದಾರೆ. ಆದ್ರೆ ಎಲ್ಲಿಂದ ಬಂದಿದ್ದಾರೆಂತ ಗೊತ್ತಿಲ್ಲ ನನಗೆ'

ಅವಳ ಮಾತಿಗೆ ಅಧಿಕಾರಿಗೆ ನಗು ಬಂತು.

'ಈಗ ಎಲ್ಲಿದ್ದಾರೆ?'

'ಅವರು ಮತ್ತೆ ಹೊಂಟೋದ್ರು ಸಾರ್'

'ಎಲ್ಲಿಗೆ?'

'ಗೊತ್ತಿಲ್ಲ, ಬುದ್ಧಿ. ಇವತ್ತು ಮುಂಜಾವಿಗೆ ಮನೆ ಬಿಟ್ರು. ಶೇಖರಪ್ಪ ಅವರನ್ನ ಕರ್ಕೊಂಡು ಹೋಗೋದಿಕ್ಕೆ ಬಂದಿದ್ದ'

'ಮುಂಜಾನೆ ಅಂದ್ರೆ, ಸುಮಾರು ಎಷ್ಟು ಹೊತ್ತಿಗೆ?' ಅಧಿಕಾರಿಯ ಪ್ರಶ್ನೆಗಳಿಗೆ ತತ್ತರಿಸಿದ ನಳಿನಿಗೆ ಕೈ ಕಾಲುಗಳಲ್ಲಿ ನಡುಕ ಆರಂಭವಾಯಿತು.

'ಗೊತ್ತಿಲ್ಲ ಬುದ್ಧಿ, ಹಾಂ! ಗೊತ್ತು ಗೊತ್ತು. ಸುಮಾರು ನಾಲ್ಕು ಗಂಟೆ ಹೊತ್ತಿಗೆ'

'ಅದು ಹೇಗೆ ನಿಖರವಾಗಿ ಹೇಳ್ತೀಯಾ ನಾಲ್ಕು ಗಂಟೇಂತ'

'ಬುದ್ಧಿ, ಆ ಹೊತ್ತಿಗೆ ಚಿಕ್ಕಮ್ಮಾರು ನನ್ನ ಎಬ್ಬಿಸಿದ್ರು'

'ಯಾಕೆ?'

'ಟಾಯ್ಲೆಟ್‌ಗೆ ಹೋಗೋದಿಕ್ಕೆ'

'ಅದಕ್ಕೂ ಸಮಯ ನೋಡ್ತಾರಾ?'

'ಉಹುಂ! ಬುದ್ಧಿ, ಅವರು ಹೊರಗೆ ಬರೋ ತಂಕ ನಾನು ಕಾಯ್ತಾ ಇರ್ತೀನಿ. ಅಷ್ಟೊತ್ತಿಗೆ ಕಾರು ಹೊರಟ ಸದ್ದು ಕೇಳಿಸ್ತು. ಅಮ್ಮೋರು ಹೊರಗೆ ಬಂದ ಕೂಡ್ಲೆ. ಟೇಮು ಎಷ್ಟಾಯ್ತೂಂತ ಕೇಳಿದ್ರು. ನಾನು ಗೋಡೆ ಗಡಿಯಾರ ನೋಡಿ ಹೇಳ್ದೆ'

ಇನ್ಸ್‌ಪೆಕ್ಟರ್‌ಗೆ ನಳಿನಿಯ ಉತ್ತರದಿಂದ ಸಮಾಧಾನವಾಯಿತು. ಆದರೆ ಗೊಂದಲವಾದದ್ದು ಭುಜಂಗೇಶರಾಯರ ವಿಷಯದಲ್ಲಿ. ಹೈದರಾಬಾದ್‌ನಿಂದ ಮರಳಿ ಮತ್ತೆ ಮರು ದಿನವೇ ವಿಶ್ರಾಂತಿ ಇಲ್ಲದೆ ಹೊರಟ್ಟಿದ್ದಾರೆ. ಅಂದರೆ ಯಾವುದೋ ಮಹತ್ತರವಾದ ಕೆಲಸದ ನಿಮಿತ್ತ ಹೊರಟಿದ್ದಾರೆ. ಕಾಕುಟ್ಟ ಕೂಡ ಹೈದರಾಬಾದ್‌ಗೆ ಹೋಗಿದ್ದಾನೆ. ಅವನ ಧ್ಯೇಯವೇನು ಅನ್ನೋದು ಅಸ್ಪಷ್ಟ! ರಾಯರಿಗೆ ಫಾರ್ಮ್ ಹೌಸ್‌ನ ಕೆಲಸ. ವಾರಗಟ್ಟಲೆ ಮನೆಯಿಂದ ದೂರವಿರುವ ಯಜಮಾನ. ಇದು ಕಾಶಮ್ಮನ ಆರೋಪ.

ಫಾರ್ಮ್ ಹೌಸ್‌ನಲ್ಲಿ ಕಟಾವಿಗೆ ನಿಂತಿದ್ದು ಕಬ್ಬಿನ ಬೆಳೆ. ಬತ್ತದ ಬೆಳೆ ಇನ್ನೂ ಚಿಗುರೊಡೆದಿಲ್ಲ. ಹಾಗಾದರೆ ಯಾವ ಬೆಳೆಯನ್ನು ವ್ಯವಹರಿಸೋದಿಕ್ಕೆ ಆತ ಹೋಗಿರುವುದು? ಕಬ್ಬು ಬೆಳೆದರೆ ಆಲೆಮನೆಯಲ್ಲಿ ಬೆಲ್ಲ ತಯಾರಾಗಿ ಇಲ್ಲಿಂದಲೇ ಅಂಗಡಿಯನ್ನು ಸೇರುತ್ತದೆ. ಹಾಗಾದರೆ ಅವರು ಮನೆಯಿಂದ ದೂರವಿರುವ ಕಾರಣವೇನು?

ಲಹರಿಯ ಕಣ್ಮರೆಯಲ್ಲಿ ಭುಜಂಗೇಶರಾಯರದೊಂದು ದೊಡ್ಡ ಪಾತ್ರವಿದೆಯೇ? ಅವಳನ್ನು ಎಲ್ಲಾದರೂ ಬಚ್ಚಿಟ್ಟು ತಾವು ಅಲ್ಲಿಗೆ ಹೋಗಿ ಬರುತ್ತಿರುವರೆ? ಹಾಗಿದ್ದರೂ ಯಾಕಾಗಿ? ಕಾಕುಟ್ಟನೇನಾದರೂ ಅವರನ್ನ ವೈಯಕ್ತಿಕ ವಿಷಯದಲ್ಲಿ ದ್ವೇಷ ಕಟ್ಟಿಕೊಂಡು ಆಟ ಆಡಿಸುತ್ತಿದ್ದಾನೆಯೆ? ಇನ್ಸ್‌ಪೆಕ್ಟರ್ ದೀರ್ಘ ಆಲೋಚನೆಗೊಳಗಾದ.

'ಸರಿ, ಮನೆಯಲ್ಲಿ ಬೇರಾರು ಇಲ್ಲವೆ?'

'ಇದ್ದಾರೆ ಬುದ್ಧಿ. ಸಣ್ಣಮ್ಮೋರು ಅವರ ಹುಡುಗ್ರೂ ಇದ್ದಾರೆ' ನಳಿನಿಯ ಮಾತಿಗೆ ಅಧಿಕಾರಿಯ ಹುಬ್ಬುಗಳು ಹಾರಿದವು. ಭುಜಂಗೇಶರಾಯರು ಮನೆಯಲ್ಲಿಲ್ಲದ ಸಮಯದಲ್ಲಿ ಕಿರಣನ ಪ್ರವೇಶ! ಮೇನಕಾಳ ಜೊತೆಗೆ ಫಾರ್ಮನ್ನೆಲ್ಲಾ ಸುತ್ತುವ ಗೀಳು ಅವನಿಗೆ!?

'ಎಲ್ಲಿದ್ದಾರೆ ಅವ್ರು?'

'ಅವ್ರು ಈಗಷ್ಟೇ ಹೊರಗೆ ಹೊಂಟೋದ್ರು'

'ಹೊರಗೆ ಅಂದ್ರೆ ಎಲ್ಲಿಗೆ? ನಿನ್ನತ್ರ ಹೇಳಿಲ್ವೆ?'

'ಇಲ್ಲ, ಚಿಕ್ಕಮ್ಮೋರು ಹೊರಗೆ ಹೋದ ಕೂಡ್ಲೆ. ಸಣ್ಣಮ್ಮೋರು ಅವರ ಹುಡುಗಂಗೆ ಫೋನ್ ಮಾಡಿ ಕರೆಸಿಕೊಂಡ್ರು. ಆಮೇಗೆ ಇಬ್ರೂನೂವೆ ಸೇರ್ಕೊಂಡು ಅಮ್ಮೋರ ಕಾರಲ್ಲಿಯೇ ಹೊರಟು ಹೋದ್ರು ಬುದ್ಧಿ'

ಇನ್ಸ್‌ಪೆಕ್ಟರ್ ರಾಜಧಾನಿಗೆ ಎಲ್ಲವೂ ಅಯೋಮಯವಾಗಿ ಕಂಡಿತು. ಎಂದೂ ಮನೆ ಬಿಟ್ಟು ತೆರಳದ ಕಾಶಮ್ಮ ಮನೆಯಿಂದ ಹೊರಗೆ ಹೋಗಿದ್ದಾರೆ?! ಹಾರುವ ಹಕ್ಕಿಗೆ ಪಂಜರದಿಂದ ಬಿಡುಗಡೆ. ಆಕೆ ಹೋಗಿರುವುದಾದರೂ ಎಲ್ಲಿಗೆ? ಮೇನಕಾ ಕಿರಣನನ್ನು ಕರೆಸಿ ಇಬ್ಬರೂ ಕಾಶಮ್ಮನನ್ನು ಹಿಂಬಾಲಿಸಿಕೊಂಡು ಹೋಗಿದ್ದಾರೆ. ಬಂದ ದಾರಿಗೆ ಸುಂಕವಿಲ್ಲದಂತಾಗಿದೆ.

'ಚಿಕ್ಕಮ್ಮೋರು ಯಾರ ಜೊತೆಗೆ ಹೊರಗೆ ಹೋಗಿದ್ದಾರೆ ಅನ್ನೋದು ಗೊತ್ತಾ?'

'ಇಲ್ಲ, ಒಬ್ರೆ ಹೋಗ್ತರ್ತೀನಿಂತ ಹೋಗ್ತಾರ. ಅವರನ್ನು ಗೇಟಿನ ವರೆಗೂ ತಲುಪಿಸಿ ಬಂದೋಳು ನಾನು. ಆಮೇಗೆ ರಾಮಸ್ವಾಮಿಯನ್ನು ಕರೆದು ಏನೋ ಹೇಳಿದ್ರು. ನಾನು ಮೇಲಿನ ಕೋಣೆಯನ್ನು ಶುಚಿಗೊಳಿಸೋದಿಕ್ಕೆ ಹೋದೆ. ಆಗ ಕಾರು ಬಂದು ನಿಂತ ಸದ್ದಾಯ್ತು. ಅಮ್ಮೋರು ಆ ಕಾರಲ್ಲೇ ಹೋಗಿರ್ಬೇಕು ಅನ್ಸುತ್ತೆ'

'ರಾಮಸ್ವಾಮಿ ಎಲ್ಲಿದ್ದಾನೆ?' ಸಣ್ಣ ಕ್ಲೂ ದೊರೆತರೂ ಕಾಶಮ್ಮನಾಗಲಿ ಅಥವಾ ಭುಜಂಗೇಶರಾಯರಾಗಲಿ ಆಪತ್ತಿಗೆ ಸಿಲುಕಿದರೆ ಸಹಾಯ ಮಾಡಬಹುದೆನ್ನುವುದು ಅಧಿಕಾರಿಯ ಇರಾದೆ. ಅದಕ್ಕಾಗಿ ಎಲ್ಲವನ್ನೂ ತಿಳಿದುಕೊಳ್ಳಬೇಕು. ರಾಮಸ್ವಾಮಿ ಅದಕ್ಕೆ ಸರಿಯಾದ ವ್ಯಕ್ತಿ.

'ಅವ್ನು ಸಣ್ಣಮ್ನೋರ ಕಾರಲ್ಲಿ ಹೋಗಿದ್ದಾನೆ. ಅವರು ಅವನ್ನ ಒತ್ತಾಯಿಸ್ತಿದ್ರು'

ಇನ್ಸ್‌ಪೆಕ್ಟರ್ ಎದ್ದು ನಿಂತ.

'ಈ ಮನೇಲಿ ಈಗ ನೀವು ಯಾರ್‍ಯಾರಿದ್ದೀರಿ?'

'ನಾನು ಅಡುಗೆ ಕೆಲಸದ ಕುಶಾಲಪ್ಪ ಮಾತ್ರ'

'ಅಮ್ಮೋರ ಜವಾಬ್ದಾರಿ ನಿನ್ನದಲ್ಲವೆ? ಈಗ ಯಜಮಾನ್ರು ಬಂದು ಕೇಳಿದ್ರೆ ಏನು ಉತ್ತರ ಕೊಡ್ತೀಯಾ?' ಅವಳನ್ನು ಆತಂಕಕ್ಕೀಡು ಮಾಡುವಂತೆ ಅಧಿಕಾರಿ ಪ್ರಶ್ನಿಸಿದ.

**(ಸಶೇಷ)**